ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಹೊನ್ನಾವರ ವಿಭಾಗ, ಹೊನ್ನಾವರ-581334
OFFICE OF THE DEPUTY CONSERVATOR OF FORESTS, HONAVAR DIVISION, HONAVAR-581334
ದೂರವಾಣಿಸಂಖ್ಯೆ: 08387-295236 e mail:dcf.honavar@gmail.com

ಕ್ರ.ಸಂ/ಬಿ2/ಜಿಎಫ್ಎಲ್/ದೂರು/ವಿವ-06/2022-23, ದಿನಾಂಕ: 20-04-2023

ಇವರಿಗೆ,

ಮಾನ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೆನರಾ ವೃತ್ತ,
ಶಿರಸಿ.

ಮಾನ್ಯರೆ,

ವಿಷಯ: Gokarna Gram panchayat to dump and burn all sorts of mixed waste, specifically.

ಉಲ್ಲೇಖ:
1. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರ ಇ ಮೇಲ್ ಸಂದೇಶ ಮತ್ತು ಕಚೇರಿ ಪತ್ರ ಸಂ:ಕೆಎಫ್ ಡಿ/ಹೆಚ್ ಓ ಎಫ್ ಎಫ್/ಸಿ/ಎಂಎಸ್ ಸಿ/5/2022, ದಿನಾಂಕ; 13-03-2023.
2. ಈ ಕಚೇರಿ ಪತ್ರ ಸಮ ಸಮ ದಿನಾಂಕ: 14-03-2023 ಮತ್ತು 01-04-2023.
3. ವಲಯ ಅರಣ್ಯ ಅಧಿಕಾರಿ, ಹಿರೇಗುತ್ತಿ ಇವರ ಕಚೇರಿ ಪತ್ರ ಸಂ:1105/2022-23, ದಿನಾಂಕ: 15-03-2023 ಮತ್ತು ಕ್ರ.ಸಂ1142/2022-23, ದಿನಾಂಕ: 29-03-2023.
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಕುಮಟಾ ಇವರ ಕಚೇರಿ ಪತ್ರ ಸಂ:ದೂರು-1349/2022-23, ದಿನಾಂಕ: 17-03-2023 ಮತ್ತು ಕ್ರ.ಸಂ:ದೂರು/08/2023-24, ದಿನಾಂಕ: 03-04-2023.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗೋಕರ್ಣ ಗ್ರಾಮ ಪಂಚಾಯತ ವ್ಯಾಪ್ತಿಯ ಗೋಕರ್ಣ ಪಾ.ಸ.ನಂ. 1492A/1A ರಲ್ಲಿ ಎಲ್ಲಾ ಬಗೆಯ ತ್ಯಾಜ್ಯ ವಸ್ತುಗಳನ್ನು ಹಾಕಿ ಸುಡುತ್ತಿದ್ದು ಈ ಬಗ್ಗೆ ಕ್ರಮಕೈಗೊಳ್ಳಬೇಕಾಗಿ ವಿನಂತಿಸಿ ಋಷಿ ಪರಿಸರ, ಗುಡಗಾರಗಲ್ಲಿ, ಕುಮಟಾ ಇವರು ದೂರು ನೀಡಿರುತ್ತಾರೆ. ಈ ಕುರಿತು ಸ್ಥಳ ಪರಿಶೀಲಿಸಿ, ನಿಯಮಾನುಸಾರ ಕ್ರಮ ಜರುಗಿಸಿ ವರದಿ ಸಲ್ಲಿಸಲು ವಲಯ ಅರಣ್ಯ ಅಧಿಕಾರಿ, ಹಿರೇಗುತ್ತಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟಾ ಇವರಿಗೆ ಉಲ್ಲೇಖ (2) ರನ್ವಯ ಸೂಚಿಸಲಾಗಿತ್ತು.

ಅದರಂತೆ ವಲಯ ಅರಣ್ಯ ಅಧಿಕಾರಿ, ಹಿರೇಗುತ್ತಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟಾ ಇವರು ಸ್ಥಳ ಪರಿಶೀಲಿಸಿ, ಗೋಕರ್ಣ ಪಂಚಾಯಿತಿಯವರು ಘನತ್ಯಾಜ್ಯ ವಿಲೇವಾರಿ ಘಟಕವನ್ನು 2006 ರಿಂದಲೇ ಅರಣ್ಯ ಪ್ರದೇಶವನ್ನು ಬಳಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಆನಂತರ ಅರಣ್ಯ

ಇಲಾಖೆಯ ಅಧಿಕಾರಿಗಳು ಸದರಿ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಸೂಕ್ತ ಅನುಮತಿ ಪಡೆಯದೇ ಸದರಿ ಪ್ರದೇಶವನ್ನು ಬಳಸಬಾರದಾಗಿ ಸೂಚಿಸಿದ ನಂತರ ಗೋಕರ್ಣ ಗ್ರಾಮ ಪಂಚಾಯತ ರವರು ಗೋಕರ್ಣ ಅ.ಸ.ನಂ.1492ಅ/1ಅ ರ ಅರಣ್ಯ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿ ಘಟಕದ ಸಲುವಾಗಿ 0.98 ಹೆ ಅರಣ್ಯ ಭೂಮಿಯನ್ನು ಬಿಡುಗಡೆ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಿದಂತೆ, ಅರಣ್ಯ ಸಂರಕ್ಷಣಾ ಕಾಯ್ದೆ 1980 ಕಲಂ (2) ರಡಿಯಲ್ಲಿ ಕೇಂದ್ರ ಸರ್ಕಾರವು ಸದರಿ ಪ್ರಸ್ತಾವನೆಯ ಸಂಬಂಧಿಸಿದಂತೆ ಹಲವು ಷರತ್ತುಗಳ ಮೇರೆಗೆ ತಾತ್ವಿಕ (Stage-I) ಅನುಮೋದನೆ ಆದೇಶ ನೀಡಲಾಗಿರುತ್ತದೆ. ಸದರ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸುತ್ತಿರುವದು ಹಾಗೂ ಸದ್ರಿ ಸ್ಥಳದ ಸುತ್ತಲೂ ಷರತ್ತಿನಂತೆ ಕಲ್ಲುಕಂಬ ಹಾಕಿ ಬೇಲಿ ನಿರ್ಮಿಸಿರುವುದು ಕಂಡು ಬಂದಿರುವುದಿಲ್ಲ. ಸದರಿ ಘನ ತ್ಯಾಜ್ಯ ವಿಲೇವಾರಿ ಘಟಕದ ಸುತ್ತಮುತ್ತಲೂ ಪ್ಲಾಸ್ಟಿಕ್ ಹಾಗೂ ಇತರೆ ಕಸ ಬಿದ್ದಿರುವುದು ಕಂಡುಬಂದಿದ್ದು, ಸುತ್ತಲಿನ ಅರಣ್ಯವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವ ಬಗ್ಗೆ ಸಂಬಂಧಿಸಿದ ಗ್ರಾಮ ಪಂಚಾಯತ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.

ಋಷಿ ಪರಿಸರ, ಗುಡಗಾರಗಲ್ಲಿ, ಕುಮಟಾ ಇವರು ನೀಡಿರುವ ದೂರರ್ಜಿಗೆ ಸಂಬಂಧಿಸಿದಂತೆ ಪುಟ ಸಂಖ್ಯೆ :05 ಹಾಗೂ ಕ್ರಮ ಸಂ. 05 ರಲ್ಲಿ, Gram Panchayat long standing illegal open dumping in forest area ಎಂದು ಹಾಗೂ ಘನತ್ಯಾಜ್ಯವನ್ನು ಸಂಗ್ರಹಿಸಿ ಬೆಂಕಿಯಿಂದ ಸುಡುವ ಬಗ್ಗೆ ಸೂಚಿಸಿದ್ದು, ಸದರಿ ಸ್ಥಳ ಪರಿಶೀಲನಾ ಸಮಯದಲ್ಲಿ ಘನತ್ಯಾಜ್ಯವನ್ನು ಸುಡುತ್ತಿರುವುದು ಕಂಡುಬಂದಿರುವುದಿಲ್ಲ.

ದೂರರ್ಜಿಯ ಪುಟ ಸಂಖ್ಯೆ. 6 ರಲ್ಲಿ ಘನತ್ಯಾಜ್ಯವನ್ನು ಹಾಕುವುದು, ಸುಡುವುದು ಹಾಗೂ Sanitary Landfill ಮಾಡುವುದು ಘನತ್ಯಾಜ್ಯ ಘಟಕದವರು ನಿರ್ಮಿಸುತ್ತಿರುವುದಾಗಿ ದೂರಿನಲ್ಲಿ ನಮೂದಿಸಿದ್ದು ಇದಕ್ಕೆ ಸಂಬಂಧಿಸಿದಂತೆ ಘನತ್ಯಾಜ್ಯ (ಪ್ಲಾಸ್ಟಿಕ್, ಗ್ಲಾಸ್ ಹಾಗೂ ಇತರೆ ಕೊಳೆಯಲಾಗದ ವಸ್ತುಗಳು) ವನ್ನು ಅಲ್ಲಲ್ಲಿ ಹಾಕಿರುವುದು ಕಂಡುಬಂದಿರುತ್ತದೆ. ಹಾಗೂ ಯಾವುದೇ ರೀತಿಯಾದಂತೆ Landfill ಮಾಡಿರುವುದು ಕಂಡುಬಂದಿರುವುದಿಲ್ಲ. ಸದರಿ ಪ್ರದೇಶಕ್ಕೆ ಹೋಗುವ ದಾರಿಯುದ್ದಕ್ಕೂ ಅರಣ್ಯ ಪ್ರದೇಶವಿದ್ದು, ಗಾಳಿಗೆ ಪ್ಲಾಸ್ಟಿಕ ವಸ್ತುಗಳು ಸುತ್ತಮುತ್ತಲಿನ ಪ್ರದೇಶದಲ್ಲಿ ಹರಡಿರುವುದು ಕಂಡುಬಂದಿರುತ್ತೆ. ಈಗಾಗಲೇ ಗ್ರಾಮ ಪಂಚಾಯತ ಅಧ್ಯಕ್ಷರಿಗೂ ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿಯವರಿಗೂ ಸೂಕ್ತ ನಿರ್ದೇಶನ ನೀಡಿದ್ದು, ಅನುದಾನದ ಕೊರತೆಯಿಂದ ತಾತ್ವಿಕ (Stage-I) ಅನುಮೋದನೆ ಆದೇಶವಾಗಿರುವ ಪ್ರದೇಶದ ಸುತ್ತಲೂ ಬೇಲಿಯನ್ನು ನಿರ್ಮಿಸಲು ಆಗಿರುವುದಿಲ್ಲವಾಗಿ ತಿಳಿಸಿರುತ್ತಾರೆ. ಎಂದು ಉಲ್ಲೇಖ (3) ಮತ್ತು (4) ರನ್ವಯ ವರದಿಯನ್ನು ಸಲ್ಲಿಸಿರುತ್ತಾರೆ.

ಸದರ ಸ್ಥಳವನ್ನು ದಿನಾಂಕ: 01-04-2023 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟಾ, ವಲಯ ಅರಣ್ಯ ಅಧಿಕಾರಿ, ಹಿರೇಗುತ್ತಿ, ಸಿಬ್ಬಂದಿ ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿ, ಗೋಕರ್ಣ ರವರೊಂದಿಗೆ ಸ್ಥಳ ಪರಿಶೀಲನೆ ಮಾಡಿ, ಕೇಂದ್ರ ಸರ್ಕಾರವು ಹಲವು ಷರತ್ತುಗಳ ಮೇರೆಗೆ ತಾತ್ವಿಕ (Stage-I) ಅನುಮೋದನೆ ಆದೇಶ ನೀಡಲಾಗಿದ್ದು. ಸದರ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸುತ್ತಿರುವದು. ಹಾಗೂ ಸದ್ರಿ ಸ್ಥಳದ ಸುತ್ತಲೂ ಷರತ್ತಿನಂತೆ ಕಲ್ಲುಕಂಬ ಹಾಕಿ ಬೇಲಿ ನಿರ್ಮಿಸಿರುವುದು

ಕಂಡು ಬಂದಿರುವುದಿಲ್ಲ. ಕೂಡಲೇ ಸದ್ರಿ ಸ್ಥಳದ ಸುತ್ತಲೂ ಷರತ್ತಿನಂತೆ ಕಲ್ಲುಕಂಬ ಹಾಕಿ ಬೇಲಿ ನಿರ್ಮಿಸಲು ನಿರ್ದೇಶನ ನೀಡಲಾಗಿರುತ್ತದೆ. ಪ್ರದೇಶಕ್ಕೆ ಹೋಗುವ ದಾರಿಯುದ್ದಕ್ಕೂ ಅರಣ್ಯ ಪ್ರದೇಶವಿದ್ದು, ಗಾಳಿಗೆ ಪ್ಲಾಸ್ಟಿಕ ವಸ್ತುಗಳು ಸುತ್ತಮುತ್ತಲಿನ ಪ್ರದೇಶದಲ್ಲಿ ಹರಡಿರುವುದು ಕಂಡುಬಂದಿರುತ್ತೆ. ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಗ್ರಾಮ ಪಂಚಾಯತ ಅಧ್ಯಕ್ಷರಿಗೂ ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿಯವರಿಗೂ ಸೂಕ್ತ ನಿರ್ದೇಶನ ನೀಡಿದ್ದು ಇರುತ್ತದೆ. ಎಂಬ ವಿಷಯವನ್ನು ತಮ್ಮ ಅವಗಾಹನೆಗಾಗಿ ತರುತ್ತಾ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟಾ ಮತ್ತು ವಲಯ ಅರಣ್ಯ ಅಧಿಕಾರಿ, ಹಿರೇಗುತ್ತಿ ಇವರ ವರದಿಯನ್ನು ಇದರೊಂದಿಗೆ ಲಗತ್ತಿಸಿ, ಗೌರವದೊಂದಿಗೆ ಸಲ್ಲಿಸಿದೆ.

ತಮ್ಮ ನಂಬುಗೆಯ,
ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ.

ಪ್ರತಿಯನ್ನು

1. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವದೊಂದಿಗೆ ಸಲ್ಲಿಸಿದೆ.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟಾ ಇವರಿಗೆ ಮಾಹಿತಿ ಹಾಗೂ ಸೂಕ್ತಕ್ರಮಕ್ಕಾಗಿ ಕಳುಹಿಸಿದೆ.
3. ವಲಯ ಅರಣ್ಯ ಅಧಿಕಾರಿ, ಹಿರೇಗುತ್ತಿ ಇವರಿಗೆ ಮಾಹಿತಿ ಹಾಗೂ ಸೂಕ್ತಕ್ರಮಕ್ಕಾಗಿ ಕಳುಹಿಸಿದೆ.

ರವಾನಿಸಲಾಗಿದೆ
ದಿನಾಂಕ: 20/4/2023
ಟಿಕ್ಕ ಸಹಿ:-

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ.